# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ "ಕರಾವಳಿ ಮೀನುಗಾರಿಕೆ, ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ" ಯೋಜನೆ – ಅಂತರ್ವರ್ತಿ ದೋಣಿಗಳ ಅಳವಡಿಕೆ ಯೋಜನೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ: ಪಸಂಮೀ/73/ಮೀಇಯೋ/2016 ದಿನಾಂಕ: 11–05–2016.

(2) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 12014/11/2010 FY(T-1) ದಿನಾಂಕ: 29–06–2016.

(3) ಜಮಾ ದೃಢೀಕರಣ ಪತ್ರ ಸಂಖ್ಯೆ: ಎಫ್‌ಡಿ/44/ಬಿಜಿಎಲ್/ 2016 ದಿನಾಂಕ: 23–08–2016.

(4) ಪತ್ರ ಸಂಖ್ಯೆ: ಪಂಮಾಯೋ/17/2011–12 (ಭಾಗ–2), ದಿನಾಂಕ: 20–09–2016.

(5) ಆರ್ಥಿಕ ಇಲಾಖೆ ಆದೇಶ ಸಂಖ್ಯೆ: ಆಇ/101/ ಬಿಆರ್‌ಎಸ್/2016, ದಿನಾಂಕ: 17–12–2016.

Received 4/1/17

******

## ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ ಯೋಜನೆ – ಅಂತರ್ವರ್ತಿ ಮೀನುಗಾರಿಕೆ ದೋಣಿಗಳನ್ನು ಅಳವಡಿಸುವ ಯೋಜನೆಯನ್ನು 2016–17ನೇ ಸಾಲಿನಲ್ಲಿ ಮುಂದುವರೆಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ, ಕೇಂದ್ರ ಸರ್ಕಾರವು ಬಾಕಿ ಸಹಾಯಧನ ಮೊತ್ತ ರೂ.499,79,000–00 ಗಳನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3)ರ ಜಮಾ ದೃಢೀಕರಣದಲ್ಲಿ, ಸದರಿ ಮೊತ್ತ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಜಮೆ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ದೃಢೀಕರಿಸಿದೆ.

ಮೇಲೆ ಓದಲಾದ ಕ್ರಮಾಂಕ (4)ರ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಸದರಿ ಯೋಜನೆಯಡಿಯಲ್ಲಿ 2016–17ನೇ ಸಾಲಿನಲ್ಲಿ ಕೇಂದ್ರದ ಪಾಲು ರೂ.50.00 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ. ಆದರೆ, ಸಹಾಯಧನವನ್ನು 132 ಫಲಾನುಭವಿಗಳಿಗೆ ವಿತರಿಸಲು ಅನುವಾಗುವಂತೆ ರೂ.499.79 ಲಕ್ಷಗಳ ಅನುದಾನದ ಅವಶ್ಯಕತೆ ಇರುವುದರಿಂದ, 2016–17ನೇ ಸಾಲಿನಲ್ಲಿ ಅಂತರ್ವರ್ತಿ ಮೀನುಗಾರಿಕೆ ದೋಣಿಗಳ ಅಳವಡಿಕೆ ಯೋಜನೆಯಡಿ

ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲು ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-103-ಸಮುದ್ರ ಮೀನುಗಾರಿಕೆ-0-21-ಅಂತರ್ವರ್ತಿ ದೋಣಿಗಳ ಅಳವಡಿಕೆ (ಕೇಂದ್ರ ಪುರಸ್ಕೃತ ಯೋಜನೆ) ಅಡಿ ಲಭ್ಯವಿರುವ ಅನುದಾನ ರೂ.50.00 ಲಕ್ಷ ಹಾಗೂ ಹೆಚ್ಚುವರಿ ಅನುದಾನ ರೂ.449.79 ಲಕ್ಷ ಹೀಗೆ ಒಟ್ಟು ರೂ.499.79 ಲಕ್ಷಗಳನ್ನು ಬಿಡುಗಡೆಗೊಳಿಸಲು ಹಾಗೂ ಬಿಡುಗಡೆ ಮಾಡುವ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಖಜಾನೆಯಿಂದ ಆರ್ಥಿಕ ಇಲಾಖೆಯ ಆದೇಶದ ಪ್ರಕಾರ ಡ್ರಾ ಮಾಡಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಆದೇಶದಲ್ಲಿ, ಸದರಿ ಯೋಜನೆಯಡಿ ಫಲಾನುಭವಿಗಳಿಗೆ ಸಹಾಯಧನ ನೀಡಲು ರೂ.449.79 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲು ಮಂಜೂರಾತಿ ನೀಡಿ, ಈ ಹೆಚ್ಚುವರಿ ಅನುದಾನವನ್ನು 2016-17ನೇ ಸಾಲಿನ ಪೂರಕ ಅಂದಾಜುಗಳು (ಮೂರನೆಯ ಕಂತು)ರಡಿ ಕ್ರಮಬದ್ಧಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ/155/ಮೀಇಯೋ/2016, ಬೆಂಗಳೂರು ದಿನಾಂಕ: 02-01-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ ಯೋಜನೆ - ಅಂತರ್ವರ್ತಿ ಮೀನುಗಾರಿಕೆ ದೋಣಿಗಳ ಅಳವಡಿಕೆ ಯೋಜನೆಯಡಿ ಫಲಾನುಭವಿಗಳಿಗೆ ಸಹಾಯಧನ ನೀಡಲು ಆದೇಶ ಸಂಖ್ಯೆ: ಆಇ/101/ಬಿಆರ್‌ಎಸ್/2016, ದಿನಾಂಕ: 17-12-2016 ರಲ್ಲಿ ಯೋಜನಾ ಲೆಕ್ಕ ಶೀರ್ಷಿಕೆ 2405-00-103-0-21-106 ಅಡಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವ ರೂ.449.79 ಲಕ್ಷಗಳು ಹಾಗೂ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ.50.00 ಲಕ್ಷಗಳು ಹೀಗೆ ಒಟ್ಟು ರೂ.499.79 ಲಕ್ಷ (ನಾಲ್ಕುನೂರ ತೊಂಬತ್ತೊಂಬತ್ತು ಲಕ್ಷದ ಎಪ್ಪತ್ತೊಂಬತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ.

ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ-00-103-ಸಮುದ್ರ ಮೀನುಗಾರಿಕೆ-0-21-ಅಂತರ್ವರ್ತಿ ದೋಣಿಗಳ ಅಳವಡಿಕೆ (ಕೇಂದ್ರ ಪುರಸ್ಕೃತ ಯೋಜನೆ) ಅಡಿ ಲಭ್ಯವಿರುವ ಅನುದಾನ ರೂ.50.00 ಲಕ್ಷ ಹಾಗೂ ಹೆಚ್ಚುವರಿ ಅನುದಾನ ರೂ.449.79 ಹೀಗೆ ಒಟ್ಟು 499.79 ಲಕ್ಷಗಳಿಂದ ಭರಿಸತಕ್ಕದ್ದು.

-3-

ಮೇಲ್ಕಂಡಂತೆ, ಬಿಡುಗಡೆಯಾಗುವ ಅನುದಾನವನ್ನು ಸಾಧಿಲ್ವಾರು ಬಿಲ್ಲಿನ ಮೂಲಕ ಸೆಳೆಯುವ ಕುರಿತಂತೆ ಈಗಾಗಲೇ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ/53/ಟಿಎಆರ್/2015, ದಿನಾಂಕ: 15-02-2016 ರಲ್ಲಿ ಸೂಚಿಸಿರುವುದರಿಂದ, ಅದರಂತೆ ಮೀನುಗಾರಿಕೆ ಸಹಾಯಧನವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಖಜಾನೆಯಿಂದ ಸಾಧಿಲ್ವಾರು ಬಿಲ್ಲಿನ ಮೂಲಕ ಸೆಳೆದು ಫಲಾನುಭವಿಗಳ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನಾ ಸಂಖ್ಯೆ: ಎಫ್‌ಡಿ/07/ಬಿಪಿಇ/2016, ದಿನಾಂಕ: 28-07-2016 ಹಾಗೂ ಆದೇಶ ಸಂಖ್ಯೆ: ಎಫ್‌ಡಿ/03/ಟಿಎಫ್‌ಪಿ/2016, ದಿನಾಂಕ: 02-04-2016 ರಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

2/1/17

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

02/01/17

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು/ಕಾರವಾರ.
6. ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ /ಹೆಚ್ಚಿನ ಪ್ರತಿಗಳು.